**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 2207/2023</u>**

**ದಿನಾಂಕಃ 20.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ನಟರಾಜ್ ಡಿ ಎನ್ | ಚಾಸಾ-1, ಪ್ರಾಸ.-1 |
| ತಂದೆಯ ಹೆಸರು ಃ | ನಾಗಪ್ಪ | |
| ವಯಸ್ಸು ಃ | 43 ವರ್ಷ | |
| ಉದ್ಯೋಗ ಃ | ವ್ಯವಸಾಯ | |
| ವಾಸ ಃ | ಕೆ. ದಾರಸರಹಳ್ಳಿ | |

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ಚಾಸಾ-2 ನನ್ನ ಅತ್ತಿಗೆ. ಚಾಸಾ-3 ಮತ್ತು 4 ನನ್ನ ಅಣ್ಣಂದಿರು. ಚಾಸಾ-6 ರಿಂದ 9 ರವರು ನನಗೆ ಪರಿಚಯ. ಆರೋಪಿತರು ನನ್ನ ಸಂಬಂಧಿಕರು. ದಿಃ 17.12.2022 ರಂದು ಸಂಜೆ 7.00 ರಿಂದ 8.00 ಗಂಟೆ ಸಮಯದಲ್ಲಿ ಚಾಸಾ-6 ಮತ್ತು 7 ರವರೊಂದಿಗೆ ಮನೆ ಹತ್ತಿರ ಇರುವ ನೀರಿನ ತೋಟ್ಟಿಯ ಬಳಿ ಜಮೀನಿನ ವಿಚಾರವಾಗಿ ಮಾತನಾಡುತ್ತಿದ್ದೆ. ಆ ಸಮಯದಲ್ಲಿ ಚಾಸಾ-3 ರಿಂದ 5 ರವರು ಹಾಜರಿದ್ದರು. ನಾನು ಚಾಸಾ-6 ಮಂಜಪ್ಪನ ಬಳಿ ನನ್ನ ತಂದೆ ಜಮೀನನ್ನು ಯಾಕೆ ಖಾತೆ ಮಾಡಿಸಿಕೊಂಡಿದ್ದೀಯಾ ಎಂದು ಕೇಳುತ್ತಿದ್ದೆ. ಅಲ್ಲಿಗೆ ಏಕಾಏಕಿ ಬಂದ 1 ರಿಂದ 3 ನೇ ಆರೋಪಿತರು ಚಾಸಾ-3 ರವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈದು ಕೈಯಿಂದ ಮೂಗಿಗೆ ಹೊಡೆದು, ಕಾಲಿನಿಂದ ಸೊಂಟಕ್ಕೆ ತುಳಿದಿರುತ್ತಾರೆ. ಜಗಳ ಬಿಡಿಸಲು ಬಂದ ಚಾಸಾ-2 ರವರ ಮೂಗಿಗೆ ಮತ್ತು ಎದೆಗೆ ಹೊಡೆದಿರುತ್ತಾರೆ. 3 ನೇ ಆರೋಪಿಯು ಅವ್ಯಾಚ್ಯ ಶಬ್ದಗಳಿಂದ ನಮಗೆ ಬೈದಿರುತ್ತಾರೆ. ಚಾಸಾ-4 ರವರಿಗೆ 1 ಮತ್ತು 2 ನೇ ಆರೋಪಿತರು ಕೈಯಿಂದ ಮತ್ತು ಕಾಲಿನಿಂದ ಹಲ್ಲೆ ನಡೆಸಿರುತ್ತಾರೆ. ಚಾಸಾ-2 ರಿಂದ 4 ರವರನ್ನು ನಾನು ಬೀರೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇನೆ. ನಂತರ ಚಾಸಾ-3 ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಅಂಬುಲೆನ್ಸನಲ್ಲಿ ಕರೆದುಕೊಂಡು ಹೋಗಿರುತ್ತೇನೆ. ಇದಾದ ಮರುದಿನ ಬೀರೂರು ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿ ದಿಃ 08.12.2022 ರ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದೂರು ನೀಡಿದ 2 ದಿನಗಳ ನಂತರ ಅಂದರೆ ದಿಃ 21 ಅಥವಾ 22 ರಂದು ಸಂಜೆ 4.00 ಗಂಟೆಗೆ ಪೋಲಿಸರು ಘಟನಾ ಸ್ಥಳಕ್ಕೆ ಬಂದಿದ್ದು, ಚಾಸಾ-8 ಮತ್ತು 9 ರವರು ತೋರಿಸಿದ ಸ್ಥಳದಲ್ಲಿ ಸುಮಾರು ಒಂದು ಗಂಟೆಗಳ ಕಾಲ ಮಹಜರ್ ಜರುಗಿಸಿ ಛಾಯಾಚಿತ್ರವನ್ನು ತೆಗೆಸಿರುತ್ತಾರೆ. ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ತೆಗೆಯಲಾದ ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ( ಆರೋಪಿತರು ಈ ದಿನ ಗೈರುಹಾಜರಾಗಿದ್ದು ಆರೋಪಿತರ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲಾ ಎಂದು ಆರೋಪಿತರ ಪರ ವಕೀಲರು ಹೇಳಿರುತ್ತಾರೆ )

**(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

**<u>ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ</u>**

ಪೋಲಿಸರು ಸ್ಥಳ ಮಹಜರ್ ಗೆ ದಿಃ 21.12.2022 ರಂದು ಬಂದಿರುತ್ತಾರೆ ಮತ್ತು ಘಟನೆ ನಡೆದ ಸ್ಥಳವನ್ನು ನಾನು ತೋರಿಸಿರುತ್ತೇನೆ ಎಂದರೆ ಸರಿ. ಸಂಜೆ 4.30 ರಿಂದ 5.30 ರವರೆಗೆ ಮಹಜರ್ ಜರುಗಿಸಿರುತ್ತಾರೆ ಎಂದರೆ ಸರಿ.

**<u>ಪಾಟೀಸವಾಲುಃ ಶ್ರೀ ಎಲ್ ಇ ಆರೋಪಿ ಪರ ವಕೀಲರಿಂದಃ</u>**

ಜಗಳವು ಸಂಜೆ 7.00 ರಿಂದ 8.00 ರವರೆಗೆ ನಡೆದಿರುತ್ತದೆ. ಗಲಾಟೆ ನಡೆದ ನಂತರ ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ 3 ದಿನ ಇದ್ದೆ. ಆಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದಿರುವುದಿಲ್ಲ. ಚಾಸಾ-2 ರಿಂದ 4 ರವರ ಹೇಳಿಕೆಯನ್ನು ಪಡೆಯಲು ಪೋಲಿಸರು ಬಂದಿರುತ್ತಾರೆ. ಆಸ್ಪತ್ರೆಗೆ ದಾಖಲಾದ ದಿನವೇ ಪೋಲಿಸರು ಹೇಳಿಕೆಯನ್ನು ಪಡೆದಿರುತ್ತಾರೆ. ಪೋಲಿಸರು ಗಾಯಾಳುವಿನ ಹೇಳಿಕೆಯನ್ನು ದಾಖಲಿಸಿದ್ದಲ್ಲಿ ಪ್ರತ್ಯೇಕ ದೂರು ನೀಡುವ ಅವಶ್ಯಕತೆ ಇರುವುದಿಲ್ಲ ಎಂದರೆ ಸಾಕ್ಷಿಯು ಪೋಲಿಸರು ದೂರನ್ನು ದಾಖಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಪೋಲಿಸರು ಬಂದಿರುತ್ತಾರೆ ಆದರೆ ಹೇಳಿಕೆಯನ್ನು ಪಡೆದಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಚಾಸಾ-3 ರವರನ್ನು ಶಿವಮೊಗ್ಗದ ಆಸ್ಪತ್ರೆಗೆ ರಾತ್ರಿ 1.00 ಗಂಟೆಗೆ ಕರೆದುಕೊಂಡು ಹೋಗಿರುತ್ತೇನೆ. ದಿಃ 17.12.2022 ರ ರಾತ್ರಿ 7.00 ರಿಂದ 1.00 ಗಂಟೆ ಸಮಯದಲ್ಲಿ ಪೋಲಿಸರಿಗೆ ದೂರನ್ನು ನೀಡಲು ಸಮಯವಿದ್ದರೂ ದೂರನ್ನು ನೀಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ನಾನು ಇರಲಿಲ್ಲ ಎಂದು ನುಡಿಯುತ್ತಾರೆ. ಗಲಾಟೆಯಾದ ಸಮಯದಲ್ಲಿ ನೀರಿನ ತೊಟ್ಟಿ ಬಳಿ ನಾನು ಚಾಸಾ-6 ರವರೊಂದಿಗೆ ಮಾತನಾಡುತ್ತಾ ನಿಂತಿದ್ದೆ. 1 ರಿಂದ 3 ನೇ ಆರೋಪಿತರು ಬಂದಿರುತ್ತಾರೆ. ಮೂರು ಜನರೂ ಪ್ರತ್ಯೇಕವಾಗಿ ಬಂದಿರುತ್ತಾರೆ. ಚಾಸಾ-3 ರವರನ್ನು ಶಿವಮೊಗ್ಗ ಆಸ್ಪತ್ರೆಗೆ ಕರೆದುಕೊಂಡು ಹೋದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಬೀರೂರಿನ ವೈದ್ಯಾಧಿಕಾರಿಗಳು ಚಾಸಾ-3 ರವರನ್ನು ಶಿವಮೊಗ್ಗದ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಸೂಚಿಸಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಯಾರಿಗೆ ಯಾರು ಹೊಡೆದಿರುತ್ತಾರೆ ಎಂದು ಖಚಿತವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ. ಅದೇ ರೀತಿ ಪಿರ್ಯಾದಿಯಲ್ಲೂ ಸಹ ಯಾರು ಯಾರಿಗೆ ಹೊಡೆದಿರುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಸರಿ. ಘಟನೆಯಾದ ಎಷ್ಟು ಸಮಯಕ್ಕೆ ಅಲ್ಲಿಗೆ ಬಂದಿರುತ್ತೀರಿ ಎಂದರೆ ಸಾಕ್ಷಿ ನಾನು ಅಲ್ಲೇ ಇದ್ದೆ ಎಂದು ನುಡಿಯುತ್ತಾರೆ. ಘಟನೆ ಆಗುವಾಗ ಸುಮಾರು 20-30 ಜನ ಸೇರಿದ್ದರು.

ಚಾಸಾ-3 ರವರಿಗೆ ಯಾರು ಹೊಡೆದಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸಾಕ್ಷಿ ಜನ ಸೇರಿದ್ದರಿಂದ ನನಗೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಚಾಸಾ-4 ರವರಿಗೆ ಯಾರು ಹಲ್ಲೆ ಮಾಡಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ. ಚಾಸಾ-5 ನನ್ನ ಅಣ್ಣ. ಚಾಸಾ-2 ರವರಿಗೆ ಯಾರು ಹೊಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲದಕಾರಣ ಯಾರು ಹೊಡೆದಿರುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಸರಿ. ಶಿವಮೊಗ್ಗದ ಆಸ್ಪತ್ರೆಯಲ್ಲಿ ಚಾಸಾ-3 ರವರು ಚಿಕಿತ್ಸೆ ಪಡೆದ ಬಗ್ಗೆ ನಾನು ಯಾವುದೇ ದಾಖಲೆ ಪೋಲಿಸರಿಗೆ

ನೀಡಿಲ್ಲ ಎಂದರೆ ಸರಿ. ಮಹಜರ್ ಮಾಡಲು ಪೋಲಿಸರು ಬಂದ ಎಷ್ಟು ಸಮಯದ ನಂತರ ನೀವು ಸ್ಥಳಕ್ಕೆ ಹೋಗಿದ್ದೀರಿ ಎಂದರೆ ಸಾಕ್ಷಿ ನಾನು ಅಲ್ಲೇ ಇದ್ದೆ ಎಂದು ನುಡಿಯುತ್ತಾರೆ. ಘಟನಾ ಸ್ಥಳವನ್ನು ಪೋಲಿಸರಿಗೆ ಯಾರು ತೋರಿಸಿರುತ್ತಾರೆ ಎಂದರೆ ಸಾಕ್ಷಿ ಗ್ರಾಮಸ್ಥರು ತೋರಿಸಿರುತ್ತಾರೆ, ನಾನು ಇದ್ದೆ ಎಂದು ನುಡಿಯುತ್ತಾರೆ. ನಿಪಿ-2 ನ್ನು ಪೋಲಿಸರು ಬರೆದಿರುತ್ತಾರೆ. ನಾನು ನಿಪಿ-2 ಕ್ಕೆ ಸಹಿ ಮಾಡುವಾಗ ನಾನು ಅದನ್ನು ಓದಿರುವುದಿಲ್ಲ. ಪೋಲಿಸರು ನನಗೆ ಅದನ್ನು ಓದಿ ತಿಳಿಸಿರುತ್ತಾರೆ. ಯಾರು ಯಾರಿಗೆ ಹೊಡೆದರು ಎಂದು ಪಂಚನಾಮೆಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ಕ್ಕೆ ಸಹಿ ಮಾಡುವಾಗ ಅದರಲ್ಲಿ ಏನು ಬರೆದಿದೆ ಎಂದು ನಾನು ಓದಿರುವುದಿಲ್ಲ. ಅದೇ ರೀತಿ ಪೋಲಿಸರು ಅದನ್ನು ಓದಿ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಅದನ್ನು ಓದಿ ಎಂದು ನಾನು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-2 ನ್ನು ನಾನು ಓದಿ ತಿಳಿಯದ ಕಾರಣ ಹಾಗೂ ಪೋಲಿಸರು ಓದಿ ತಿಳಿಸಿದ ಕಾರಣ ಅದರಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿಲ್ಲ ಎಂದರೆ ಸರಿ. ಪೋಲಿಸರು ಘಟನಾ ಸ್ಥಳಕ್ಕೆ ಬಂದು 2-3 ಛಾಯಾಚಿತ್ರಗಳನ್ನು ತೆಗೆದು ನಮ್ಮ ಸಹಿ ಪಡೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ಪೋಲಿಸರು ಸುಮಾರು ಒಂದು ಗಂಟೆ ಇದ್ದರು.

ಚಾಸಾ-2 ರವರಿಗೆ ಏನು ಗಾಯವಾಗಿತ್ತು ಎಂದು ನನಗೆ ಮಾಹಿತಿ ಇಲ್ಲಾ ಎಂದರೆ ಸಾಕ್ಷಿ ಅವರ ಎದೆಯ ಭಾಗಕ್ಕೆ ನೋವಾಗುತ್ತಿತ್ತು ಎಂದು ನುಡಿಯುತ್ತಾರೆ. ಹೆಚ್ಚಿನ ಜನ ಸೇರಿದ್ದರಿಂದ ಚಾಸಾ-2 ರವರಿಗೆ ಯಾರು ಹೊಡೆದಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ. ನಾನು ಪೋಲಿಸರಿಗೆ ದೂರು ನೀಡಿದ ನಂತರ ಪುನಃ ಪೋಲಿಸರು ನನ್ನನ್ನು ವಿಚಾರಣೆಗೆ ಕರೆದಿರುವುದಿಲ್ಲ. ಘಟನೆಯಿಂದ ನನಗೆ ಯಾವುದೇ ಗಾಯಗಳಾಗಿರುವುದಿಲ್ಲ ಎಂದರೆ ಸರಿ. ನನಗೂ ಆರೋಪಿತರಿಗೂ ಜಮೀನಿನ ವಿವಾದ ಇರುವ ಕಾರಣ ನಾನು ಮತ್ತು ನನ್ನ ಸಹೋದರರು ಸೇರಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಚಾಸಾ-7 ನನ್ನ ಅತ್ತಿಗೆ. ಚಾಸಾ-8 ಮತ್ತು 9 ರವರು ಗ್ರಾಮಸ್ಥರು. ಚಾಸಾ-2 ರಿಂದ 10 ರವರು ನಮ್ಮ ಕುಟುಂಬ ವರ್ಗದವರು ಎಂದರೆ ಸರಿ. ನಮ್ಮ ಕುಟುಂಬದವರನ್ನು ಹೊರತುಪಡಿಸಿ ಪೋಲಿಸರು ಬೇರೆ ಯಾರನ್ನು ವಿಚಾರಣೆಗೆ ಕರೆದಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ : ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.